ಹೊರತು ಕಲಾವಿದರನ್ನಲ್ಲ. ಆತ್ಮವನ್ನು ಆರಾಧಿಸಬೇಕೇ ಹೊರತು ದೇಹವನ್ನಲ್ಲ. ಅಧ್ಯಾತ್ಮವು ಅಂತರಂಗದಲ್ಲಿಯೇ ಅಡಗಿರುತ್ತದೆ. ನಾವು ಕಂಡುಕೊಳ್ಳುವ ಬೆಳಕಿನಲ್ಲಿ ಅಧ್ಯಾತ್ಮದ ಶಕ್ತಿಯು ಹೊಳೆಯಬೇಕು. ಆದರೆ ಪ್ರಸ್ತುತ ನಾವು ಹಣ್ಣಿನ ಸಿಪ್ಪೆಯನ್ನು ಆರಾಧಿಸುತ್ತ, ಹಣ್ಣನ್ನೇ ಕಡೆಗಣಿಸುವ ಪರಿಸ್ಥಿತಿಗೆ ಬಂದು ತಲುಪಿದ್ದೇವೆ. ಭಾರತೀಯ ನೃತ್ಯಪರಂಪರೆಯ ಆಶಯವು ಭಕ್ತಿ ಮತ್ತು ಶಕ್ತಿಯಲ್ಲಿ ಅಡಗಿದೆ. ಇದರ ಸತ್ವವನ್ನು ಅರಿಯುವ ಬದಲಾಗಿ ನಮ್ಮ ಗುರುಗಳು ಗ್ರೇಟ್, ನಮ್ಮ ನೃತ್ಯಶೈಲಿಯೇ ಪರಿಶುದ್ಧವಾದುದು ಎಂದು ಕೊಚ್ಚಿಕೊಳ್ಳುತ್ತ ಇರುವುದರಿಂದ ಯಾವುದೇ ಫಾಯಿದೆ ಇಲ್ಲ.

◆ **ಬರೋಡಾದವರಾದ ನೀವು ದೇಶದ ಉದ್ದಗಲಕ್ಕೂ ವಿವಿಧ ಕಾರಣಗಳಿಗಾಗಿ ಪ್ರವಾಸ ಮಾಡುತ್ತೀರಿ. ಆದರೆ ಬೆಂಗಳೂರು ನಿವಾಸಿಯಾಗಿದ್ದೀರಿ. ಬೆಂಗಳೂರಿನ ಬಗ್ಗೆ ನಿಮ್ಮ ಅನಿಸಿಕೆ ಏನು?**

ಕರ್ನಾಟಕ ಸಭ್ಯ ವ್ಯಕ್ತಿಗಳ ನಾಡು. ಬೆಂಗಳೂರಿನಲ್ಲಿ ವಾಸಿಸುತ್ತ ನಾನು ನನ್ನ ಅಧ್ಯಯನ, ಬರವಣಿಗೆಯನ್ನು ಪ್ರಶಾಂತವಾಗಿ ನಿರ್ವಹಿಸಬಹುದು. ಚೆನ್ನೈಯಲ್ಲಿ ಕಾಣಿಸುವ ಉದ್ಧಟತನ ಇಲ್ಲಿಲ್ಲ. ಇದು ಕಲಾವಿದರಿಗೆ, ಬರಹಗಾರರಿಗೆ ಅನುಕೂಲಕರವಾಗಿರುವ ರಾಜ್ಯ. ಜನರು ಇಲ್ಲಿ ಇನ್ನೊಬ್ಬರ ವೈಯಕ್ತಿಕ ವಿಚಾರಗಳಿಗೆ ತಲೆಕೆಡಿಸಿಕೊಂಡು ತೊಂದರೆ ಮಾಡುವುದಿಲ್ಲ. ಕಲಾವಿದರು, ಬರಹಗಾರರ ನಡುವೆ ವೃತ್ತಿ ಮಾತ್ಸರ್ಯ, ದ್ವೇಷ ಕಾಣಿಸುವುದಿಲ್ಲ. ಅಲ್ಲದೆ ನಾನು ಏಕಾಂತ ಬಯಸುವವನು. ಸಾಮಾಜಿಕ ಜಾಲತಾಣಗಳಿಂದ ದೂರವಾಗಿದ್ದುಕೊಂಡು ನನ್ನ ಕೆಲಸ ಮಾಡಿಕೊಂಡು ಹೋಗುತ್ತೇನೆ.

◆ **ಸತ್ರಿಯಾ ನೃತ್ಯ ಪ್ರಕಾರಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಬಳಿಕ ಭಾರತದ ಇತರ ಯಾವುದೇ ಕಲಾಪ್ರಕಾರಕ್ಕೆ ಈ ಸ್ಥಾನ ದೊರೆತಿಲ್ಲ. ಅನೇಕ ಕಲೆಗಳು ಈ ಮನ್ನಣೆಗೆ ಅರ್ಹವಾಗಿದ್ದು, ಕಾಯುತ್ತಿವೆ. ಕಲಾವಿದರು ಅಥವಾ ಕಲಾಪೋಷಕರು ಈ ನಿಟ್ಟಿನಲ್ಲಿ ಒಗ್ಗಟ್ಟಿನ ಪ್ರಯತ್ನಗಳನ್ನು ಮಾಡುತ್ತಿಲ್ಲ ಎಂದು ಅನಿಸುತ್ತದೆಯೇ ?**

ಇದು ಪಕ್ಕಾ ರಾಜಕೀಯ ಲೆಕ್ಕಾಚಾರಗಳ ಮೇಲೆ ನಡೆಯುತ್ತದೆ. ಸಂಗೀತ ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ಆ ಕಾಲದ ಸಂಗೀತ ದಿಗ್ಗಜ ಭೂಪೇನ್ ಹಜಾರಿಕಾ ಅವರು ಕೆಲಸ ಮಾಡುತ್ತಿದ್ದಾಗ, ತಮ್ಮ ಪ್ರದೇಶದ ಸತ್ರಿಯಾ ನೃತ್ಯಕ್ಕೆ ಶಾಸ್ತ್ರೀಯ ಸ್ಥಾನ ದೊರೆಯುವಂತೆ ಮಾಡಿದರು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಕರ್ನಾಟಕದ ಪ್ರಸಿದ್ಧವಾದ ಮತ್ತು ಸಮಗ್ರವಾದ ಕಲಾಪ್ರಕಾರ ಯಕ್ಷಗಾನಕ್ಕೆ ಶಾಸ್ತ್ರೀಯ ಮನ್ನಣೆ ಯಾಕೆ ಸಿಕ್ಕಿಲ್ಲ? ಯಾಕೆಂದರೆ, ಸಂಗೀತ ನಾಟಕ ಅಕಾಡೆಮಿಯ ಜೊತೆಗೆ ಅಥವಾ ಸರ್ಕಾರದ ಜೊತೆಗೆ ಗುದ್ದಾಡಿ, ಕರ್ನಾಟಕದಿಂದ ಸರಿಯಾಗಿ ಲಾಬಿ ಮಾಡುವರು ಇನ್ನೂ ಸಜ್ಜುಗೊಂಡಿಲ್ಲ ಎಂದರ್ಥ. ಹಾಗೆ ನೋಡಿದರೆ ಮನ್ನಣೆಯನ್ನು ಮೀರಿ ಎಲ್ಲ ನೃತ್ಯಗಳು ಸುಂದರವಾದುವೇ. ಈ ಕೃತಕ ವಿಭಾಗೀಕರಣದ ಅಗತ್ಯವೇ ಇಲ್ಲ.

◆ **ನೀವು ಯಕ್ಷಗಾನ ನೋಡಿದ್ದೀರಾ?**

ಹೌದು. 1975ರಲ್ಲಿ ನಾನು ಉಡುಪಿಯ ಎಂ.ಜಿ.ಎಂ. ಕಾಲೇಜು ಸೇರಬೇಕು ಎಂಬ ಪ್ರಸ್ತಾಪವಿತ್ತು. ವಿದ್ವಾಂಸರಾದ ಕು.ಶಿ. ಹರಿದಾಸ ಭಟ್ಟರು ನನ್ನ ತಂದೆಗೆ ತುಂಬಾ ಪರಿಚಿತರು. ಹಾಗಾಗಿ ನಾವು ಉಡುಪಿಗೆ ಬಂದು ಕಾಲೇಜು ನೋಡಿದ್ದೆವು. ಕೆಲವು ದಿನಗಳ ಕಾಲ ಉಡುಪಿಯಲ್ಲಿದ್ದಾಗ ನಾವೆಲ್ಲ ಯಕ್ಷಗಾನ ನೋಡಿದ್ದೆವು. ಅನಂತರ ಹಲವು ಬಾರಿ ಯಕ್ಷಗಾನ ನೋಡುವ ಅವಕಾಶ ಲಭಿಸಿದೆ. ಕೋಟ ಶಿವರಾಮ ಕಾರಂತರು ಯಕ್ಷಗಾನಕ್ಕೆ ಸಂಬಂಧಿಸಿ ಮಾಡಿದ ಕೆಲಸಗಳು, ಕೆರೆಮನೆ ಶಂಭು ಹೆಗಡೆ ಅವರ ಸಾಧನೆಗಳನ್ನು ನಾನು ಹತ್ತಿರದಿಂದ ನೋಡಿ ಬಲ್ಲೆ. ನಮ್ಮ 'ಅಟೆಂಡೆನ್ಸ್' ಇಯರ್‌ಬುಕ್‌ನ ಮೊದಲನೆಯ ಮುಖಪುಟವೇ ಯಕ್ಷಗಾನಕ್ಕೆ ಸಂಬಂಧಿಸಿದ್ದಾಗಿತ್ತು. ವಿಶ್ವ ನೃತ್ಯ ದಿನಾಚರಣೆಯ ಕಾರ್ಯಕ್ರಮವು ಯಕ್ಷಗಾನ ಕಲಾವಿದರ ಪ್ರಸ್ತುತಿಯೊಂದಿಗೆ ಆರಂಭವಾಗುತ್ತದೆ. ನುಡಿದಂತೆ ನಡೆಯಬೇಕು ಎನ್ನುವುದು ನನ್ನ ಇರಾದೆ.

ಸಾಗುವುದಿದೆ ಬಹುದೂರ, ವಿರಮಿಸುವ ಮುನ್ನ...

●